ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಕೆ ಎಂ ಜೆ ವಕೀಲರಿಂದಃ

ಭಾಗ್ಯಮ್ಮ ಎನ್ನುವವರು ನನ್ನ ಅಕ್ಕ. ಅವರು ತೀರಿಕೊಂಡಿರುತ್ತಾರೆ. ಅವರಿಗೆ ಒಂದು ಹೆಣ್ಣು ಮಗಳು ಇರುತ್ತಾರೆ. ಆಕೆ ಈಗ 15 ವರ್ಷ ವಯಸ್ಸು ಇರುತ್ತದೆ. ಆಕೆಯನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ.

2008 ರಲ್ಲಿ ಭಾಗ್ಯಮ್ಮ, ಮಂಗಳಮ್ಮ, ಸವಿತಾ ಮತ್ತು ನಾನು ಸೇರಿ ನಮ್ಮ ತಂದೆಯ ಮತ್ತು 3 ನೇ ಪ್ರತಿವಾದಿ ವಿರುದ್ಧ ಭಾಗ ಕೋರಿ ದಾವೆ ಸಲ್ಲಿಸಿದ್ದೆವು ಎಂದರೆ ಸರಿ. ಆ ದಾವೆ ಕೇತೋಹಳ್ಳಿ ಗ್ರಾಮ ಸರ್ವೇ ನಂಬರ್ 233 ರಲ್ಲಿ 2 ಎಕರೆ 16 ಗುಂಟೆ ಸ್ವತ್ತಿಗೆ ಹಾಕಿರುತ್ತೇವೆ ಎಂದರೆ ಸರಿ. ಆ ದಾವೆಯಲ್ಲಿ ಪ್ರಸ್ತುತ ದಾವೆಯ 3 ನೇ ಪ್ರತಿವಾದಿ ವಕೀಲರ ಮೂಲಕ ಹಾಜರಾಗಿ ಲಿಖಿತ ಹೇಳಿಕೆ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎನ್ನುತ್ತಾರೆ.

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ನಾನು 1 ನೇ ವಾದಿ ವನಜಾಕ್ಷಮ್ಮ 2 ನೇ ಪ್ರತಿವಾದಿ ಮಂಗಳಮ್ಮ, 4 ನೇ ಪ್ರತಿವಾದಿ ಸವಿತಾ ರವರ ಪರವಾಗಿ ಸಲ್ಲಿಸಿರುತ್ತೇನೆ. ಈ ಹಿಂದೆ ನ್ಯಾಯಾಲಯದಲ್ಲಿ ನಾನು ಸಲ್ಲಿಸಿದ್ದ ಓಎಸ್ 195/2008 ರಲ್ಲಿ ನಾನು ಮತ್ತು ಭಾಗ್ಯಮ್ಮ, ಮಂಗಳಮ್ಮ, ಸವಿತ, ವನಜಾಕ್ಷಮ್ಮ ರವರ ಸೇರಿ ಸಲ್ಲಿಸಿರುತ್ತೇವೆ ಎಂದರೆ ಸರಿ. ಆ ದಾವೆಯಲ್ಲಿ

ವಜಾ ಆಗಿರುತ್ತದೆ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರಸ್ತುತ ದಾವೆಯನ್ನು ಸರ್ವೇ ನಂಬರ್ 233, ಸರ್ವೇ ನಂಬರ್ 165 ಮತ್ತು ಮನೆ ಆಸ್ತಿ 32 100 ಅಡಿ ಮೇಲೆ ದಾವೆ ಮಾಡಿರುತ್ತೇವೆ.

ದಾವಾ ಸ್ವತ್ತುಗಳ ಚಕ್ಕಂದಿಗಳ ನನಗೆ ಗೊತ್ತಿರುತ್ತದೆ. ದಾವಾ ಐಟಂ-1ರ ಸ್ವತ್ತಿನ ಚಕ್ಕಂದಿ ಉತ್ತರಕ್ಕೆ ಸೋಮಣ್ಣನವರ ಜಮೀನು, ದಕ್ಷಿಣಕ್ಕೆ ರಾಮಯ್ಯನವರ ಜಮೀನು, ಪೂರ್ವಕ್ಕೆ ಮಹಾಲಿಂಗಯ್ಯನವರ ಜಮೀನು ಮತ್ತು ಪಶ್ಚಿಮಕ್ಕೆ ಕೆಂಪಒಡೆಯರ್ ರವರ ಜಮೀನು ಇರುತ್ತದೆ.

ದಾವಾ ಐಟಂ-2ರ ಚಕ್ಕಂದಿ ದಕ್ಷಿಣಕ್ಕೆ ಚಿಕ್ಕಹನುಮಯ್ಯನ ಜಮೀನು, ಉತ್ತರಕ್ಕೆ ರಾಮಯ್ಯನ ಜಮೀನು, ಪೂರ್ವಕ್ಕೆ ಮೋಟಯ್ಯನ ಜಮೀನು ಮತ್ತು ಪಶ್ಚಿಮಕ್ಕೆ ಮುಸ್ಲಿಂರ ಸ್ವತ್ತು ಇದ್ದು ಅವರ ಹೆಸರು ನನಗೆ ಗೊತ್ತಿರುವುದಿಲ್ಲ.

ದಾವಾ ಐಟಂ-3 ಮನೆಯ ಚಕ್ಕಂದಿ ಪೂರ್ವಕ್ಕೆ ಮನೆ, ಪಶ್ಚಿಮಕ್ಕೆ ಶಂಬುಲಿಂಗೇಶ್ವರ ದೇವಸ್ಥಾನ, ಉತ್ತರಕ್ಕೆ ರಸ್ತೆ ಮತ್ತು ದಕ್ಷಿಣಕ್ಕೆ ಮೂಡಾಚಾರ್ ರವರ ಮನೆ ಇರುತ್ತದೆ.

ದಾವಾ ಆಸ್ತಿಗಳು ಮೂಲತಃ ನಮ್ಮ ಅಜ್ಜಿ ದೇವಮ್ಮನಿಗೆ ಸೇರಿರುತ್ತದೆ. ನಮ್ಮ ಅಜ್ಜಿ ರವರಿಗೆ ಅವರ ಅಪ್ಪನ ಕಡೆಯಿಂದ ಬಂದ ಆಸ್ತಿಯಾಗಿರುತ್ತದೆ, ನಮ್ಮ ಅಜ್ಜಿ ದೇವಮ್ಮನವರು ತನ್ನ ಎಲ್ಲಾ ಆಸ್ತಿಗಳನ್ನು ದಿನಾಂಕ

20.05.1979 ರಂದು ತನ್ನ ಮೊಮ್ಮಕ್ಕಳಿಗೆ ವಿಭಾಗ ಮಾಡಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಸಿ.ಟಿ ಸಿದ್ದರಾಜು ರವರಿಗೆ 3 ಜನ ಹೆಣ್ಣು ಮತ್ತು 3 ಜನ ಗಂಡು ಮಕ್ಕಳು ಅವರ ಹೆಸರು ಅನಿಲ್, ಸತೀಶ್, ಮೋಹನ್, ರಾಜೇಶ್ವರಿ, ಲತಾ ಮತ್ತು ಮಮತ.

ನನ್ನ ತಂದೆ ಮಲ್ಲಿಕಾರ್ಜುನಯ್ಯ ರವರಿಗೆ 1 ಗಂಡು ಮತ್ತು 5 ಜನ ಹೆಣ್ಣು ಮಕ್ಕಳು. ದಾವಾ ಆಸ್ತಿಗಳು ನಮ್ಮ ತಂದೆಯ ತಂದೆಯವರ ಆಸ್ತಿಗಳು ಅಲ್ಲ ಎಂದರೆ ಸಾಕ್ಷಿಯು ದಾವಾ ಐಟಂ-2 ಸ್ವತ್ತು ನಮ್ಮ ತಂದೆಯ ತಂದೆಯ ಆಸ್ತಿ, ದಾವಾ ಐಟಂ-1 ಮತ್ತು 3 ರ ಸ್ವತ್ತು ನಮ್ಮ ತಂದೆ ಯ ತಾಯಿಗೆ ಸೇರಿದ ಸ್ವತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ನಮ್ಮ ತಂದೆಯ ತಾಯಿಯವರರಿಗೆ ಅವರ ತಾಯಿ ಕಡೆಯಿಂದ ಬಂದಿರುವ ಆಸ್ತಿಗಳಾಗಿರುತ್ತದೆ ಎಂದರೆ ಸರಿ.

ನಮ್ಮ ತಂದೆಯ ತಾಯಿಯವರಿಗೆ ಅವರ ಅಣ್ಣ ಅರಿಶಿನ ಕುಂಕುಮಕ್ಕೆ ದಾವಾ ಐಟಂ-1 ಮತ್ತು 3 ರ ಸ್ವತ್ತುಗಳನ್ನು ನೀಡಿರುತ್ತಾರೆ. ಐಟಂ-1 ಮತ್ತು 3 ಸ್ವತ್ತುಗಳು ನಮ್ಮ ಅಜ್ಜಿ ತೀರಿಕೊಂಡ ನಂತರ ನಮ್ಮ ತಂದೆಗೆ ಬಂದಿರುತ್ತದೆ. ನಮ್ಮ ಅಜ್ಜಿರವರು ಬದುಕಿದ್ದಾಗಲೇ ನಮ್ಮ ತಂದೆ ಮತ್ತು ದೊಡ್ಡಪ್ಪನವರಿಗೆ ಬಾಯಿ ಮಾತಿನಲ್ಲಿಯೇ ಐಟಂ-1 ರ ಸ್ವತ್ತನ್ನು ಅರ್ಧ ಭಾಗ

ಮಾಡಿಕೊಟ್ಟಿದ್ದರು. ಉಳಿದ ಐಟಂ-2 ಮತ್ತು 3 ರ ಆಸ್ತಿಯಲ್ಲಿ ನಮ್ಮ ತಂದೆ ಮತ್ತು ನಾವು ಇದ್ದೆವು. ನಮ್ಮ ವಾದ ಪತ್ರದಲ್ಲಿ ದಾವಾ ಆಸ್ತಿಗಳನ್ನು ನಮ್ಮ ತಂದೆ ಮತ್ತು ದೊಡ್ಡಪ್ಪನವರು ಸಮನಾಗಿ ಪಾಲು ಮಾಡಿಕೊಂಡಿರುತ್ತಾರೆ ಎಂದು ಬರೆಯಲಾಗಿರುತ್ತದೆ ಎಂದರೆ ಸರಿ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ ಕಾರಣ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಮಹೇಶ್ ಬಿ.ಟಿ)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.